ಓ ಎಸ್ ಃ **36/2016** ಪಿ. ಡಬ್ಲ್ಯೂ **1**

ಸಾಕ್ಷಿಯನ್ನು ದಿಃ **12.11.2020** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಜಿ.ಪಿ ವಕೀಲರಿಂದಃ

ದಾವಾ ಆಸ್ತಿಯನ್ನು 1984 ಇಸವಿಯಲ್ಲಿ ಖರೀದಿ ಮಾಡಿರುತ್ತೆನೆ. ಮಹಾದೇವಮ್ಮ ಮತ್ತು ಜಯಲಕ್ಷಮ್ಮಮ, ವೆಂಕಟೇಶ ಕಡೆಯಿಂದ ಖರಿದಿಸಿರುತ್ತೇನೆ. ದಾವಾ ಆಸ್ತಿ ಸದರಿಯವರಿಗೆ ಪಿತ್ರಾಜಿತವಾಗಿ ಬಂದಿರುವ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ಜಯಲಕ್ಷಮಮ್ಮಾ ಮತ್ತು ಗೌರಮ್ಮ ಅವರಿಂದ 11.06.1982 ರಲ್ಲಿ ಎಸ್.ವೆಂಕಟೇಶ ರವರು ಕ್ರಯಕ್ಕೆ ಪಡೆದಿರುತ್ತಾರೆ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಚೆಕ್ಕು ಬಂಧಿ ಪೂರ್ವಕ್ಕೇ ಮಹಾದೇವಮ್ಮ , ಪಶ್ಚಿಮಕ್ಕೆ ಸಿದ್ದೇಗೌಡ ಮತ್ತು ಭಾಗ್ಯಮ್ಮ ಉತ್ತರಕ್ಕೆ ನಾಲೆ ದಕ್ಷೀಣಕ್ಕೆ ರಸ್ತೆ ಬರುತ್ತದೆ. ನಾನು ಕ್ರಯಕ್ಕೆ ಪಡೆದ ಸಂಭರ್ದಲ್ಲಿ ಮನೆ ಮಾತ್ರ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸಾಕ್ಷಿ ಮುಂದುವರೆದು ಗಲ್ಲಿ ಸಹ ಸೇರಿಸಿ ಕ್ರಯಕ್ಕೆ ಪಡೆದಿರುತ್ತೆನೆ ಎಂದು ನುಡಿದಿರುತ್ತಾರೆ. ನಿಪಿ1 ದಾಖಲೆಯಲ್ಲಿ ಗಲ್ಲಿ ಸೇರಿಸಿ ಕ್ರಯಕ್ಕೆ ಪಡೆದಿರುತ್ತೆನೇ ಎಂದು ಒಕ್ಕಣೆ ಇರುವುದಿಲ್ಲ. ನನ್ನ ಮಾರಾಟಗಾರರು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆಯುವ ಸಂಧರ್ಬದಲ್ಲಿ ಕ್ರಯ ಪತ್ರದಲ್ಲಿ ಪಶ್ಚಿಮ ಕಡೆ 1 ನೇ ಪ್ರತಿವಾದಿಯ ತಂದೆಯವರಿಗೆ ಸೇರಿದ ಮನೆ ಬರುತ್ತದೆ ಎಂದು ನಮೂದು ಆಗಿರುತ್ತದ್ದೆ. ಯಾವುದೇ ಗಲ್ಲಿ ಇರುವುದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯವರ ಮನೆ ಮಧ್ಯದಲ್ಲಿ ಯಾವುದೇ ಗಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಪಡೆದ ಮನೆ ಸುತ್ತಮುತ್ತಲು ಪಶ್ಚಿಮ ಕಡೆ ಹೊರತುಪಡಿಸಿ ಬೇರೆ ಯಾವ ಕಡೆಯು ಗಲ್ಲಿ ಇರುವುದಿಲ್ಲ. ಮನೆ ಕ್ರಯಕ್ಕೆ ಪಡೆದ ಮನೆಯ ಉತ್ತರ ಕಡೆಗೆ ಇರುವ ಖಾಲಿ ನಿವೇಶನ ನನಗೆ ಸೇರಿತ್ತು. ಸದರಿ ನೀವೆಶನ ನನಗೆ ಸೆರಿದೆ ಎಂದು ತೋರಿಸಿದ್ದು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿದ್ದೆನೆ. ನನ್ನ ದವಾ ಪತ್ರ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಿ ಸಹ ಸದರಿ ನಿವೇಶನ ನನಗೆ ಸೇರಿದೆ ಎಂದು ಬರೆಸಿರುತ್ತೇನೆ. ದಾವಾ ಆಸ್ತಿಯ ಮತ್ತು ಉತ್ತರ ಕಡೆ ಇರುವ ಖಾಲಿ ನಿವೇಶನ ಪೂರ್ವ ಪಶ್ಚಿಮ ಅಳತೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆ ಮತ್ತು ಪ್ರತಿವಾದಿಯವರ ಆಸ್ತಿ ಮಧ್ಯೆ ಗಲ್ಲಿ ಎಷ್ಟು ಅಡಿ ಅಳತೆ ಇದೆ ಅಂತ ನಾನು ಹೇಳಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ 1965 ಪ್ರತಿವಾದಿಯವರು ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು 1987 ರಲ್ಲಿ ಮನೆಯನ್ನು ಖರೀದಿ ಮಾಡಿದ ಸಮಯದಲ್ಲಿ ಪಶ್ಚಿಮ ಕಡೆ ಒಂದನೆ ಪ್ರತಿವಾದಿಯವರ ತಂದೆಗೆ ಸೇರಿದ ಮನೆ ಇತ್ತು ಎಂದರೆ ಸರಿ. 1983 ಇಸವಿಯಲ್ಲಿ ಈಗ ಪ್ರತಿವಾದಿ ಇರುವ ಆಸ್ತಿಯನ್ನು 1 ನೇ ಪ್ರತಿವಾದಿಯ ತಂದೆ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಮನೆ ಉತ್ತರ ದಕ್ಷಿಣ ಕಡೆ ಇರುವ ಅಳತೆ ಒರೆಗೂ ಪಕ್ಕದಲ್ಲಿ ಪ್ರತಿವಾದಿಯವರ ಮನೆ ಇರುತ್ತದೆ ಎಂದರೆ ಸಾಕ್ಷಿ ಗಲ್ಲಿ ನಂತರೆ

ಇರುತ್ತದೆ ಎಂದರೆ ಸರಿ. ಮನೆಯ ಹಿಂದೆ ಖರೀದಿ ಮಾಡುವ ಪೂರ್ವದಲ್ಲಿ ನನ್ನ ಮಾರಟಾಗಾರರು ಎರಡು ಕಡೆ ರಸ್ತೆಯಂದ ಒಡಾಡುತ್ತಿದ್ದರು ಎಂದು ಸಾಕ್ಷಿ ಮುಂದುವರಿದೆ ತಮ್ಮ ಮನೆಯ ಮುಂಭಾಗದಲ್ಲಿ ರಸ್ತೆ ಮತ್ತ ಗಲ್ಲಿಯಿಂದ ಒಡಾಡುತ್ತದ್ದರು ಎಂದರೆ ಸರಿ. ನನ್ನ ಮಾರಾಟಗಾರರಿಗೆ ದಾವಾ ಆಸ್ತಿಯು ಉತ್ತರಕಡೆಯಲ್ಲಿ ಅವರಿಗೆ ಸೇರಿದ ಯಾವ ರೀತಿಯ ಖಾಲಿ ನಿವೇಶನ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿ ಮನೆಯ ಮಧ್ಯದ ಯಾವುದೇ ಗಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಪತ್ರದಲ್ಲಿ ನಮೂದು ಮಾಡಿರುವ ಅಳತೆ, ಪೂರ್ವ ಪಶ್ಚಿಮ 25 ಉತರ ದಕ್ಷಿಣ 70 ಅಡಿ ಎಂದು ಬರೆಸಿರುವುದು ಪಶ್ಚಿಮದ ಕೊಣೆ ಗೊಡೆ ಮುಕ್ತಾಯವಾಗುತ್ತದೆ ಎಂದರೆ ನಾವು ಗಲ್ಲಿಯನ್ನು ಒಡಾಡಕ್ಕೇ ಬಿಟ್ಟಿರುತೇವೆ ಎಂದು ನುಡಿಯುತ್ತಾರೆ. ಮನೆ ಖರೀದಿ ಮಾಡಿದ ನಂತರ ಅದನ್ನು ನಿರ್ಮೂಲ ಮಾಡಿ ಹೊಸ ಮನೆ ಕಟ್ಟಿರುತೇವೆ. ಲೈಸನ್ಸ್ ಪಡದ ನಂತರ ಮನೆ ನಿರ್ಮಾಣ ಮಡಡಿರುತ್ತೇವೆ ಅದರ ಅಳತೆ ನನಗೆ ಗೊತ್ತಿರುವುದಿಲ್ಲ. ಅದಕ್ಕೆ ಸಂಭಂದಪಟ್ಟಂತೆ ಕಂದಾಯ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಮನೆ ಕಟ್ಟಿವ ಸಂದಭದಲ್ಲಿ ಸೆಟ್ ಬ್ಯಾಕ್ ಜಾಗವನ್ನು ಸೇರಿಸಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಹಿಂದೆ ನನ್ನ ಮಾರಾಟಗಾರರಾದ ವೆಂಕಟೇಶರವರು ಇದ್ದ ಮನೆಗೆ ದಕ್ಷಿಣ ಮತ್ತು ಉತ್ತರ ಕಡೆ ಬಾಗಿಲು ಇತ್ತು . ನನ್ನ ಮನೆಯ ಪೂರ್ವದಲ್ಲಿ ಇರುವ ಮನೆಯ ಉತ್ತರದ ಕಡೆ ಬಾಗಿಲು ಇಲ್ಲ. ಮನೆ ಖರೀದಿ ಮಾಡಿದ ನಂತರ ಹಿಂದಗಡೆ ಬಾಗಿಲು ನಿರ್ಮಾಣ ಮಾಡಿದ್ದೇನೆ ಅದಕ್ಕೆ ಮೊದಲು ಬಾಗಿಲು ಇರಲಿಲ್ಲ ಎಂದರೆ ಸರಿಯಲ್ಲ. ನಮಗೆ ಸೇರಿದ ಖಾಲಿ ನಿವೇಶನಕ್ಕೆ ನಾವು ದೊರೆಸ್ವಾಮಿ ಮನೆಯ ಮುಂದುಗಡೆ ಇರುವ ರಸ್ತೆಯಿಂದ ಬಂದು ಗಲ್ಲಿ ಕಡೆಗೆ ಹೋಗುತ್ತೀದೆ. ನಾನು ಮನೆ ತಗೊಂಡ ನಂತರ ಖಾಲಿ ಜಾಗವನ್ನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮನೆಯ ಖರೀದಿ ಮಾಡುವ ಪೂರ್ವದಲ್ಲಿ ನರಸೀಪುರದಲ್ಲಿ ಇರುವ ಮನೆಯಲ್ಲಿ ವಾಸವಗಿದ್ದೇವು. ನಾನು ದಾವಾ ಆಸ್ತಿ ಮನೆಯನ್ನು ಖರೀದಿ ಮಾಡುವ ಪೂರ್ವದಲ್ಲಿ ನಮ್ಮ ಊರಿನಲ್ಲಿ ನಮಗೆ ಸೇರೆದ ಯಾವ ಆಸ್ತಿ ಇರುವುದಿಲ್ಲ. ಗೌರಮ್ಮ ನನಗೆ ಅತ್ತೆಯಾಗಬೇಕು. ಸದರಿಯವರು ನನ್ನ ಹೆಂಡತಿ ಪರವಾಗಿ ನನ್ನ ಹೆಸರಿನಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಮುಂದುವರಿದು ನಾನು ಲೋನ್ ಪಡೆದು ದಾವಾ ಅಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ನರಸೀಪುರ ಮನೆಯಲ್ಲಿ ವಾಸವಿದ್ದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಹಿಂದ 7 ರಿಂದ 8 ಹಸುಗಳನ್ನು ಸಾಕಿದ್ದೇವು ಈಗ 4 ಹಸುಗಳನ್ನು ಸಾಕುತ್ತಿದೆವು. ನರಸೀಪುರದ ಮನೆಯಲ್ಲಿ ಸಹ ಹಸುಗಳನ್ನು ಸಾಕಿದ್ದೇವು. ಸದರಿ ಹಸುವುಗಳಿಂದ ಬಂದ ಹಾಲನ್ನು ಡೈರಿಗೆ ನೀಡುತ್ತಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ಈಗ ನಾನು ವಾಸವಿರುವ ದಾವಾ ಆಸ್ತಿಯ ದಕ್ಷಿಣ ಮತ್ತು ಉತ್ತರ ಕಡೆಗ ಬಾಗಿಲು ಇದೆ. ಪಶ್ಚಿಮದ ಕಡೆ ಬಾಗಿಲು ಇರುವುದಿಲ್ಲ. ಪಶ್ಚಿಮ ಕಡೆ ಯವುದೇ ಗಲ್ಲಿ ಇಲ್ಲದಿರುವುದರಿಂದ ಸದರಿ ಕಡೆಯಲ್ಲಿ ಬಾಗಿಲು ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ದಾವಾ ಆಸ್ತಿ ಗಲ್ಲಿ ಜಾಗದಲ್ಲಿ ಕಟ್ಟಡ ಕಟ್ಟುತಿದ್ದಾರೆ ಎಂದು ಪಂಚಾಯಿತಿ ಕಚೇರಿಯಲ್ಲಿ ದೂರು ಕೊಟ್ಟಿರುವ ಬಗ್ಗೆ ದಾಖಲೆ ಹಾಜರು ಪಡಿಸಿದ್ದೆನೆ. ಸದರಿ ವಿಚಾರವಾಗಿ ತಹಸೀಲ್ದಾರರು ಮಹಾಜರು ಮಾಡಲು ಸ್ದಳಕ್ಕೆ ಬಂದಿರುತ್ತಾರೆ. ಅದರ ಬಗ್ಗೆ ಯವುದೇ ದಾಖಲೆ ಕೊಟ್ಟಿರುವುದಿಲ್ಲ. ನಾನು ಆ ರೀತಿ ಯಾವುದೇ ದೂರನ್ನು ಪಂಚಾಯಿತಿ ಕಚೇರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಪೂರ್ವದಲ್ಲಿ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ. ಆ ವಿಚಾರವಾಗಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಯಾವುದೇ ದೂರು ಕೋಟ್ಟಿರುವುದಿಲ್ಲ ಆದರೆ ಕೊಟ್ಟಿದ್ದೆನೆಂದು ಸುಳ್ಳು ಸಾಕ್ಷಿ ನೀಡಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿ ಈ ದಾವಾ ಸಲ್ಲಿಸುವ ಒಂದು ತಿಂಗಳ ಪೂರ್ವದಲ್ಲಿ ಗಲ್ಲಿ ಇರುವ ಕಡೆ ನಲ್ಲಿಯನ್ನು ಹಾಕಿರುತ್ತಾರೆ. ಪ್ರತಿವಾದಿ 2005 ನೇ ಇಸವಿಯಲ್ಲಿ ನಲ್ಲಿಯನ್ನು ಹಾಕಿರುತ್ತಾರೆಂದರೆ ಸರಿಯಲ್ಲ. ಮನೆಯ ನಲ್ಲಿ ಹಾಕಲು ಲೈಸನ್ಸ್ ಕೊಡುವಾಗ ಒಂದ ಸಾರಿ ಕೊಡುತ್ತಾರೆಂದರೆ ಸಾಕ್ಷಿ ಮುಂದುವರೆದು ಈಗ ಪ್ರತಿವಾದಿ ಗಲ್ಲಿ ಕಡೆ ನಲ್ಲಿಯನ್ನು ಎಕ್ಸ್ಟೆಂಡ್ ಮಾಡಿ ಹಾಕಿರುತ್ತಾರೆಂದು ನುಡಿಯುತ್ತಾರೆ. ದಾವಾ ಆಸ್ತಿ ಗಲ್ಲಿ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ